ಅಲ್ಟ್ ಪ್ರೊಸೀ LEP-SR-140/29-5-1968.

FORM H (*Rule 43*)

ಡೆ॥ ಕಮೀಶನರಪ್ಪು ಫರ್ಮಾಯಿಸಿದಾಗ ಖಾತೆದಾರರಾಗಲಿಚ್ಛಿಸುವ ಜನರು ಮಾಡಿ-ಕೊಡಬೇಕಾಗುವ ಕಬುಲಾಯತಿಯ ವೈಕಲ್ಪಿಕ ನಮೂನೆಯು.

ಕ ಬು ಲಾ ಯಿ ತು .

ನಾನು , ದ ತಹಶೀಲದಾರ ಇವರಿಗೆ—

ಸಾಕೇನ ಜಿಲ್ಲೆ ಇವನು ಈ ಕೆಳಗೆ ಬರೆದ ಶರ್ತುಗಳನ್ವಯ ಇದಕ್ಕೆ ಲಗತು ಇಟ್ಟ ಪರಿಶಿಷ್ಟನಲ್ಲಿ ನಿರ್ದಿಷ್ಟ ಮಾಡಿದ ಭೂಮಿಯ ಖಾತೆಯನ್ನು ನನ್ನ ಮತ್ತು ನನ್ನ ಮುಖತ್ಯಾರರ ವತಿಯಿಂದ ಸ್ವೀಕರಿಸಲಿಕ್ಕೆ ಒಪ್ಪಿಕೊಳ್ಳು-ತ್ತೇನೆ. ಮತ್ತು ನನ್ನ ಹೆಸರು ಭೂಮಿಯ ದಪ್ತರಿನಲ್ಲಿ ಸದರೀ ಭೂಮಿಯ ಖಾತೆದಾರನೆಂದು ದಾಖಲು ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

— ಶ ರ್ತು ಗ ಳು —

(೧) ಸದರೀ ಭೂಮಿಯ ಸಂಬಂಧದಿಂದ ಕಾಯದೇಶೀರು ರೀತಿಯಿಂದ ಸಲ್ಲತಕ್ಕದ್ದಾಗುವ ಭೂಮಿಯ ಮಹಸೂಲನ್ನು ವೇಳೆ ವೇಳೆಗೆ ಕೊಡುವೆನು. ಸದರೀ ಭೂಮಿಯ ಗೇಣಿಯೆಂದು 1-7-1968 ದಿಂದ 30-6-1978 ವರ್ಷಗಳ ಬಗ್ಗೆ (ಪ್ರತಿಯೊಂದು ದರದಂತೆ) ರೂಪಾಯಿ 1-75 ರ ರಕಮನ್ನು ಪ್ರತಿ ವರ್ಷ ಕೋಡುತ್ತ ಬರುವೆನು ಮತ್ತು ಆ ನಂತರ ವೇಳೆ ವೇಳೆಗೆ ಕಾಯದೇಶೀರ ಅಧಿಕಾರಿಯು ನೇಮಿಸಬಹುದಾದ ಹೆಚ್ಚಿನ ಮುದ್ದತ್ತಿನ ಬಗ್ಗೆ ಅಂಥ ಗೇಣಿಯನ್ನು ಕೊಡುವೆನು.

(೨) ಇದರ ತಾರೀಖಿನಿಂದ ಎರಡು ವರ್ಷಗಳ ಮುದ್ದತಿನೊಳಗೆ ಅಥವಾ ಕಾಯದೇಶೀರ ಅಧಿಕಾರಿಯಿಂದ ನೇಮಿಸಲ್ಪಡಬಹುದಾದಂಥ ಹೆಚ್ಚಿನ ಮುದ್ದತಿನೊಳಗೆ ಸದರಿ ಭೂಮಿಯ ಮೇಲೆ ಈ ಕೆಳಗಿನ ವರ್ಣನೆಯ ಮತ್ತು ಕಾಯಮು ಪ್ರಕಾರದ ಒಂದು ಇಮಾರತನ್ನು (ಅಥವಾ ಇಮಾರತುಗಳನ್ನು) ಕಟ್ಟಿಸುವೆನು ಮತ್ತು ಇಂಥ ಇಮಾರತು (ಅಥವಾ ಇಮಾರತುಗಳು) ಸದರೀ ಭೂಮಿಯ ಒಟ್ಟು ಕ್ಷೇತ್ರದ ಪೈಕಿ ಒಂದು ನಾಲ್ಕಾಂಶಕ್ಕಿಂತ ಹೆಚ್ಚಿಲ್ಲದಷ್ಟು ಕ್ಷೇತ್ರವನ್ನು ವ್ಯಾಪಿಸುವದು. (ಅಥವಾ ವ್ಯಾಪಿಸುವವು.)

(ಇಲ್ಲಿ ವರ್ಣನೆಯನ್ನು ಕೊಡಬೇಕು.)

ಗ್ರಾಮ	ಸ. ನಂಬರ	ಪ್ಲೊಟ ನಂ.	ಕ್ಷೇತ್ರ	ಆಕಾರ
		21	ಎ-3-8	1-75

(೩) ೧೯೨೯ ನೇ ಇಸವಿಯ ಮುಂಬಯಿಯ ಭೂಮಿಯ ಮಹಸೂಲಿನ ಕಾಯದೆಯ ಠರಾವುಗಳು, ಮತ್ತು ಅದರನ್ವಯ ಆಯಾ ವೇಳೆಯಲ್ಲಿ ಅಮಲಿನಲ್ಲಿರುವ ಎಲ್ಲ ಕಾನೂನುಗಳ ಮತ್ತು ಹುಕುಮುಗಳ ಸದರೀ ಕಾನೂನುಗಳು ಈ ಶರ್ತುಗಳಿಗೆ ಲಾಗು ಇದ್ದು ವಿರುದ್ಧ ವಿರದಿದ್ದಷ್ಟರ ಮಟ್ಟಿಗೆ ನಾನು ಸದರೀ ಭೂಮಿಗೆ ಖಾತೆದಾರನಾದ ಸಂಗತಿಗೆ ಲಾಗೂ ಇರುವವು.

(೪) ಈ ಮೇಲೆ ಹೇಳಿದ ಶರ್ತುಗಳಿಗೆ ಒಳಪಟ್ಟು ನಿರಂತರವಾಗಿ ನಾನು ಸದರೀ ಭೂಮಿಯ ಖಾತೆದಾರನಾಗಲಿಕ್ಕೆ ಭಾಧ್ಯ-ನಿರುವೆನು. ಆದರೆ ಮೇಲೆ ಹೇಳಿದ ಶರ್ತುಗಳ ಪೈಕಿ ಯಾವದಾದರೂ ಶರ್ತನ್ನು ನಾನು ಮುರಿದರೆ ಡೆ॥ ಕಮೀಶನರರು ಸದರೀ ಭೂಮಿಯು ಸರಕಾರ ದಾಖಲೆ ಆಗಿದೆಂದು ಜಾಹೀರ ಮಾಡಬಹುದು. ಮತ್ತು ಅವನಿಗೆ ಯೋಗ್ಯ ಕಂಡ ಯಾವದಾದರೂ ರೀತಿಯಲ್ಲಿ ನನಗೆ ಅಥವಾ ನನ್ನ ಮುಖಾಂತರವಾಗಿ ಧಾರಣ ಮಾಡುವವನಿಗೆ ಅಥವಾ ನನ್ನ ತಾಬೇದಾರನಾಗಿ ಧಾರಣ ಮಾಡುವವನಿಗೆ ಎನೂ ಹಕ್ಕು ಇಲ್ಲದೇ ಸದರೀ ಭೂಮಿಯ ವ್ಯವಸ್ಥೆ ಮಾಡಬಹುದು.

(೫) ಮೇಲೆ ಹೇಳಿದ ಶರ್ತುಗಳಿಗೆ ಒಳಪಟ್ಟು ಸದರೀ ಭೂಮಿಯ ಭೋಗವಟೆಯನ್ನು ನಿರಂತರವಾಗಿ ಮಾಡಲಿಕ್ಕೆ ನನಗೆ ಹಕ್ಕಿರತಕ್ಕದ್ದು. ಆದರೆ ಮೇಲೆ ಹೇಳಿದ ಶರ್ತುಗಳ ಪೈಕಿ ಯಾವದೇ ಶರ್ತನ್ನು ನಾನು ಮುರಿದರೆ ಈ ಬಗ್ಗೆ ಡೆ॥ ಕಮೀಶನರನು ಫರ್ಮಾಯಿಸಬಹುದಾದ ದಂಡವು ಅಥವಾ ಆಕರಣೆಯು ಕೊಡಲ್ಪಟ್ಟ ಬಳಿಕ ಅವನು ಸದರಿ ಭೂಮಿಯು ನನ್ನ ಭೋಗವಟೆಯಲ್ಲಿ-ರುವದು. ಚಾಲು ಇರಲಿಕ್ಕೆ ಪರವಾನಗೆ ಕೊಡಬಹುದು.

(೬) ಮೇಲಿನ (೬) ರಕಮಿನಲ್ಲಿ ಯಾವದೇ ಮಜಕೂರಿದ್ದಾಗ್ಯೂ, ಈ ವೇಣಗಿಯ ಠರಾವುಗಳ ವಿರುದ್ಧವಾಗಿ ಕಟ್ಟಿದ ಅಥವಾ ಉಪಯೋಗಿಸಿದ ಯಾವದೇ ಇಮಾರತನ್ನು ಅಥವಾ ಕಟ್ಟಡವನ್ನು ಡೆ॥ ಕಮೀಶನರನು ಈ ಬಗ್ಗೆ ಗೋತ್ತುಪಡಿಸ ಬಹುದಾದ ಮುದ್ದತಿ-ನೊಳಗೆ ತೆಗೆದು ಹಾಕಬೇಕೆಂದು ಅಥವಾ ಬದಲಾಯಿಸಬೇಕೆಂದು ಡೆ॥ ಕಮೀಶನರನು ಫರ್ಮಾಯಿಸುವದು. ಕಾಯದೇಶೀರವಾಗ ತಕ್ಕದ್ದು. ಮತ್ತು ಗೊತ್ತುಪಡಿಸಿದ ಮುದ್ದತಿನೊಳಗೆ ಹೀಗೆ ತೆಗೆದು ಹಾಕದಿದ್ದರೆ ಅಥವಾ ಬದಲಾಯಿಸದಿದ್ದರೆ ಅವನು ಅದನ್ನು ತಾನಾಗಿ ಮಾಡಿಸಬಹುದು. ಮತ್ತು ಅದನ್ನು ಮಾಡಿಸಿದ ಬಗ್ಗೆ ಆದ ಖರ್ಚನ್ನು ನನ್ನ ಕಡೆಯಿಂದ ಭೂಮಿಯ ಮಹಸೂಲಿನ ಬಾಕಿಯಂತೆ ವಸೂಲ ಮಾಡಬಹುದು.

(೫) ಡೆಪ್ಯೂಟ ಕಮೀಶನರರ ಪೂರ್ವ ಮಂಜೂರಿಯನ್ನು ಪಡೆಯದೆ. (೬) ಸ್ವಂತದ ಮನೆ ಹೊರ್ತಾಗಿ ಇತರ ಉದ್ದೇಶಗಳ ಸಲುವಾಗಿ ಸದರೀ ಭೂಮಿಯನ್ನು ಹಾಗೂ ಆದರ ಮೇಲೆ ಕಟ್ಟಲ್ಪಟ್ಟ ಅಥವಾ ಕಟ್ಟಲ್ಪಡತಕ್ಕ ಇಮಾರತುಗಳನ್ನು ನಾನು ಉಪಯೋಗಿಸ-ತಕ್ಕದ್ದಲ್ಲ ಅಥವಾ ಅವುಗಳ ಉಪಯೋಗವನ್ನು ಮಾಡಲು ಪರವಾನಗಿ ಕೊಡತಕ್ಕದ್ದಲ್ಲ.

(೭) ನಾನು ನನ್ನ ವಾರಸದಾರರು ವೃತ್ಯು ಪತ್ರ ನಡಿಸುವವರ ಕಾರಭಾರ ನಡಿಸುವವರು ಹಾಗು ಪಸಂತು ಮಾಡಲ್ಪಟ್ಟ ಅಧಿಕಾರಿಯು ಸರಕಾರದವರ ಪೂರ್ವಲೇವಿ ಮಂಜೂರಿಯನ್ನು ಹೊರತು ಯಾವದೇ ಕಾಲಕ್ಕೆ ಸದರೀ ಭೂಮಿಯನ್ನು ಅಥವಾ ಅದರ ಯಾವದೇ ಭಾಗವನ್ನು ಅಥವಾ ಅದರಲ್ಲಿಯ ಯಾವದೇ ಹಿತ ಸಂಬಂಧವನ್ನು ತಬದಿಲ ಮಾಡಿ ಕೊಡತಕ್ಕದ್ದಲ್ಲವೆಂಬ ಹೆಚ್ಚಿನ ಶರ್ತ-

ಉಪಯೋಗಿಸತಕ್ಕದ್ದು. (vi) ಇಮಾರತ ಶರ್ತುಗಳಿಗೆ ಒಳಪಡಿಸಿ ಮತ್ತು ಈಗ ಅಮಲಿನಲ್ಲಿರುವ ಇಮಾರತ ರೂಲ್ಸುಗಳಂತ್ತೆ ಇಮಾರತು-ಗಳನ್ನು ಕಟ್ಟತಕ್ಕದ್ದು. (vii) ಈ ಬಗ್ಗೆ ವಿಶೇಷವಾಗಿ ಕಡ್ಮಿ ಮಾಡಿಕೊಟ್ಟ ಬಿನ್‌ಶೆತ್ಕಿ ಆಕಾರವನ್ನು ದರ ಗುಂಠೆಗೆ ೦.32 ಮಾತ್ರದಂತೆ ಕೊಡತಕ್ಕದ್ದು.

ಬಿಲ್ಡಿಂಗ ಶರ್ತುಗಳು.

(i) ಪ್ರತಿಯೊಂದು ಇಮಾರತಿನ ಸೂತ್ತಲು ೧೦ ಫೂಟ ಜಾಗಾ ಖುಲ್ಲಾ ಬಿಡತಕ್ಕದ್ದು.

(ii) ಮೆ|| ಡೆಪ್ಯೂಟಿ ಕಮೀಶನರ ಸಾ॥ ಬಾ|| ರವರು ಯಾ ಅಧಿಕಾರ ಪಟ್ಟ ಆಫೀಸರರ ಪರವಾನಗಿ ಶಿವ್ಯಾ ಯಾವದೇ ಜಾಗೆಯಲ್ಲಿ ಪಾಯಖಾನೆ ಹೊಲಸು ಸಂಗ್ರಹ ಯಾ ಕುದರೆ ಕಟ್ಟುವ ಲಾಯ ಯಾಗಲೀ ಕಟ್ಟಕೂಡದು.

(iii) ಪ್ರತಿಯೊಂದು ಇಮಾರತಿನ ಸೂತ್ತಲೂ ೩೦ ಯಾರ್ಡಿನೊಳಗೆ ಎಶ್ತರವಾದಂಥ ಜಾಗೆಯಲ್ಲಿ ಇಮಾರತು ಕಟ್ಟಬೇಕು. ಮತ್ತು ಅದರ ನೆಲಗಟ್ಟು ೨ ಫೂಟುಗಳ ಎತ್ತರವಾಗಿ ಇರಬೇಕು.

(iv) ಸದರೀ ಜಾಗೆಯಲ್ಲಿ ಕಟ್ಟಿಸಿದ ಇಮಾರತು ಸ್ವಂತ ಮನೆ ಇಡುವ ಪೂರ್ತವೇ ಉಪಯೋಗಿಸಬೇಕು.

(v) ಕಟ್ಟಿಸಿದ ಇಮಾರತು ಕಾರಖಾನೆ ಬಗ್ಗೆ ಯಾಗಲೀ ಯಾ ಅಪಾಯಕಾರಕ ವಸ್ತುಗಳ ವ್ಯಾಪಾರ ಮಾಡುವದಕ್ಕೆ ಉಪಯೋಗಿಸಕೂಡದು.

(vi) (ಅ) ಮುಖ್ಯ ರಸ್ತೆಗೆ ಮೋರೆ ಮಾಡಿ ಇಮಾರತು ಕಟ್ಟತಕ್ಕದ್ದು. ಒಂದಕ್ಕಿಂತ ಹೆಚ್ಚು ರಸ್ತೆಗಳು ಇದ್ದಲ್ಲಿ ಅವುಗಳ ಪೈಕಿ ಮುಖ್ಯ ರಸ್ತೆಗೆ ಮೋರೆ ಮಾಡಿ ಇಮಾರತು ಕಟ್ಟತಕ್ಕದ್ದು.

(vi) (ಬ) ಗ್ರಾಮ ರಸ್ತೆ ಮಧ್ಯದಿಂದ ೪೦ ಫೂಟು ಮತ್ತು ಲೋಕಲ್ ಬೊರ್ಡ ರಸ್ತೆ ಮಧ್ಯದಿಂದ ೫೦ ಫೂಟು ವ ಮೇಜರ ಡಿಸ್ಟ್ರಿಕ್ಟ ರಸ್ತೆ ಮಧ್ಯದಿಂದ ೬೦ ಫೂಟು ಮತ್ತು ಪ್ರಿವ್ಹಿನ್ಸಿಯಲ್ ರಸ್ತೆ ಮಧ್ಯದಿಂದ ೧೦೦ ಫೂಟು ಅಂತರದ ಮೇಲೆ ಇಮಾರತ ಕಟ್ಟತಕ್ಕದ್ದು.

(vii) ಬಿನ್‌ಶೆತ್ಕಿ ಪ್ಲೋಟಿನಲ್ಲಿ ಕಟ್ಟತಕ್ಕ ಇಮಾರತು ಅರ್ಧ ಕ್ಷೇತ್ರಕ್ಕಿಂತ ಹೆಚ್ಚಿಗೆ ಆಚ್ಛಾದಿಸಲಿಕ್ಕಿಲ್ಲಾ. ಬಾಕಿ ಕ್ಷೇತ್ರ ಯಾವದೇ ಇಮಾರತನ್ನು ಕಟ್ಟದೇ ಖುಲ್ಲಾ ಇಡುವೆನು.

(viii) ಸಹಜವಾಗಿ ಬೆಂಕಿ ಹಿಡಿಯುವಂಥ ಪದಾರ್ಥ ಅಂದರೆ ಹುಲ್ಲು ವಗೈರೆ ಉಪಯೋಗಿಸಲಿಕ್ಕಿಲ್ಲಾ.

(ix) ಮೇಲಿನ ಯಾವದೇ ಶರ್ತನ್ನು ಉಲ್ಲಂಘಿಸಿದಲ್ಲಿ ಈ ಮಂಜೂರಿಯನ್ನು ರದ್ದು ಗೊಳಿಸಲಾಗುವದಲ್ಲದೇ ಈ ಶರ್ತು ವ ಕರಾರುಗಳಂತ್ತೆ ಇತರ ಶಿಕ್ಷೆಗೆ ಸಹ ಪಾತ್ರರಾಗಬೇಕಾಗುವದು.

ಪರಿಶಿಷ್ಟ ೧

ಮುಕ್ಕಾಮು ತಾರೀಖು 7 ತಿಂಗಳ ಸೆನ್ ೧೯೬೯

(ಸಹಿ.)

ಬರೆದವನು R. G. Naik
Shantaya Gaonkar


(ಮುಚ್ಚಳಿಕೆಯ ಅಗತ್ಯವಿದ್ದರೆ)

Before me

ಸಾಕ್ಷೀದಾರರ ಸಹಿ. ೧)
೨)

Takeildar Ankola

ಈ ಮುಂದೆ ಪ್ಲಾನನ್ನು ಬರೆಯಬೇಕು.





Approved

ಅಂಕೋಲಾ, ತಾ. 7 — 11 — ೧೯೬೯

(ಸಹಿ.)

ತಹಶೀಲದಾರ ಅಂಕೋಲಾ.

Internal